# ಸೇವಾಪಥ

SEVA BHARATHI
सेवा ही परमो धर्मः

ಸಂಚಿಕೆ : 06
ಸಂಪುಟ : 05

ಸೇವಾಭಾರತಿ(ರಿ.), ಬೆಳ್ತಂಗಡಿ ತಾ|| ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಜೂನ್ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ-||, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216



## ಹಾಸನದಲ್ಲಿ 25ನೇ ಉಚಿತ 3 ದಿನಗಳ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ. 14 ಮಂದಿ ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗಿ

## ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಅರಿವು

## ಹಾಸನ ಜಿಲ್ಲೆಯಲ್ಲಿ ಗಾಲಿಕುರ್ಚಿ ಜಾಥಾ

## ವಿಶ್ವ ರಕ್ತದಾನಿಗಳ ದಿನಾಚರಣೆ ಪ್ರಯುಕ್ತ ಧರ್ಮಸ್ಥಳದಲ್ಲಿ ಬೃಹತ್ ರಕ್ತದಾನ ಶಿಬಿರ 177 ಯೂನಿಟ್ ರಕ್ತ ಸಂಗ್ರಹ

## ಧರ್ಮಸ್ಥಳದ ನಾರ್ಯದಲ್ಲಿ 27ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ

## ಸೇವಾಧಾಮದಲ್ಲಿ ಯೋಗ ಮತ್ತು ಜಾಗೃತಿ ಕಾರ್ಯಾಗಾರ

## ಉಡುಪಿ 'ಜನಸ್ಪಂದನ ಕಾರ್ಯಕ್ರಮ'ದಲ್ಲಿ ಡಿ.ಸಿ, ಡಿಎಚ್‌ಒಗೆ ಮನವಿ

## ರಾಜ್ಯ ಆಯುಕ್ತರು ಕರ್ನಾಟಕ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯಿದೆ ಶ್ರೀ ದಾಸ್ ಸೂರ್ಯವಂಶಿಯವರ ಜೊತೆ ಆನ್ಲೈನ್ ಮುಖಾಂತರ ಮುಖಾಮುಖಿ ಸಂವಾದ

## ಬೆನ್ನುಹುರಿ ಅಪಘಾತಗೊಂಡರು ಧೃತಿಗೆಡದೆ ಅಡಿಕೆ ಸುಲಿಯುತ್ತಿರುವ ಪರಮೇಶ್ವರ್ ವಿಟ್ಲ – ಯಶೋಗಾಥೆ

## ನಮ್ಮಿಂದಿಷ್ಟು

ತಮಗೆಲ್ಲರಿಗೂ ನಮಸ್ಕಾರಗಳು,

ಬೆನ್ನುಹುರಿ ಅಪಘಾತವು ನಮ್ಮ ಶತ್ರುಗಳಿಗೂ ಆಗಬಾರದು. ಈ ಮಾತನ್ನು ಬೆನ್ನುಹುರಿ ಅಪಘಾತಗೊಂಡವರು ತಮ್ಮ ಜೀವನದುದ್ದಕ್ಕೂ ಹೇಳುತ್ತಲೇ ಬರುತ್ತಿದ್ದಾರೆ. ಅದು ನಿಜಕೂಡ ಆಗಿದೆ. ಎಲ್ಲವೂ ಇದ್ದು ಯಾವುದೂ ಇಲ್ಲದಂತೆ ಇರುವ ಬದುಕು. ಆ ಬದುಕಿನ ಪೂರ್ತಿ ಒಂದಲ್ಲ ಒಂದು ಸಮಸ್ಯೆಗಳು ದೇಹಕ್ಕೆ ಸೇರಿಕೊಳ್ಳುತ್ತದೆ ಇರುವುದು ನಮ್ಮ ದೌರ್ಭಾಗ್ಯ. ಈ ನಿಟ್ಟಿನಲ್ಲಿ ಜಾಗೃತಿಸಭೆ – ಸಮಾರಂಭಗಳು, ಜಾಥಾಗಳು ಆಗುತ್ತಲೇ ಇರಬೇಕು. ಈ ನಿಟ್ಟಿನಲ್ಲಿ ಮಾಹಿತಿ ಕಾರ್ಯಗಳು ಮೂರು ದಿನಗಳ ವಸತಿಯುತ ಶಿಬಿರಗಳು ದಿವ್ಯಾಂಗರ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಬೇಕು.

ಕುಂದಾಪುರದಲ್ಲಿ ನಡೆದ ಜಾಗೃತಿ ಕಾರ್ಯಗಾರದಲ್ಲಿ 2 ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) 32 ಮಂದಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) ಹಾಗೇ ಹಾಸನದಲ್ಲಿ ನಡೆದ 3 ದಿನದ ಶಿಬಿರದಲ್ಲಿ MRW, VRW, URW ಒಟ್ಟು 24 ಮಂದಿ ಭಾಗವಹಿಸಿದ್ದರು. ಇಂತಹುದು ನಡೆಯುತ್ತಲೇ ಇರಬೇಕು. ಅಪಘಾತವಾಗದಂತೆ ಮಾಹಿತಿ ಮತ್ತು ಅಪಘಾತಗೊಂಡವರನ್ನ ಶೀಘ್ರ ಗುರುತಿಸಿ ಸೂಕ್ತ ಚಿಕಿತ್ಸೆ ಅಗತ್ಯ ಕ್ರಮಗಳನ್ನು ಕೈಗೊಂಡರೆ ಅಪಘಾತದ ನಂತರದ ಸಮಸ್ಯೆಗಳನ್ನು ಕಡಿಮೆಗೊಳಿಸಬಹುದಾಗಿದೆ.

ಧರ್ಮಸ್ಥಳದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ದಾಖಲೆ ಮಟ್ಟದ 177 ಯೂನಿಟ್ ರಕ್ತ ಸಂಗ್ರಹವಾಯಿತು. ರಕ್ತದಾನಿಗಳ ಆಸಕ್ತಿ ಮತ್ತು ಸಹಭಾಗಿತ್ವ ಸಂಸ್ಥೆಗಳ ಒಟ್ಟುಗೂಡಿಸಿವಿಕೆ ಹಾಗೂ ಪ್ರಯತ್ನಗಳು ಯಶಸ್ವಿ ಶಿಬಿರಕ್ಕೆ ಕಾರಣವಾಯಿತು.

27ನೇ ಉಚಿತ ಟೈಲರಿಂಗ್ ತರಬೇತಿಯು ಧರ್ಮಸ್ಥಳ ಗ್ರಾಮದ ನಾರ್ಯದಲ್ಲಿ ಪ್ರಾರಂಭಗೊಂಡಿತು. ಸುಮಾರು 25 ಮಂದಿ ಮಹಿಳೆಯರು ಈ ತರಬೇತಿಯ ಫಲಾನುಭವಿಗಳು. ಮಹಿಳಾ ಸಶಕ್ತೀಕರಣ ಕ್ಕಾಗಿ ಈ ಯೋಜನೆ–ಸಬಲಿನಿ.

ಮೊತ್ತಮೊದಲ ಬಾರಿಗೆ ನಾವು ಹಾಸನ ಜಿಲ್ಲೆಯಲ್ಲಿ ಮೂರು ದಿನಗಳ ಉಚಿತ ವಸತಿಯುತ ಆರೋಗ್ಯ ತಪಾಸಣೆ, ತರಬೇತಿಯನ್ನು ಆಯೋಜಿಸಿದ್ದೆವು. ಉತ್ತಮ ಪ್ರತಿಕ್ರಿಯೆ ಲಭ್ಯವಾಗಿತ್ತು. ರಾಜೀವ್ ಆಯುರ್ವೇದ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಹಾಸನ, ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸಿಬಿಲಿಟಿ, ಬೆಂಗಳೂರು ಇವುಗಳ ಸಹಭಾಗಿತ್ವದಲ್ಲಿ ನಡೆದ ಈ ಶಿಬಿರದಲ್ಲಿ ಯೋಗ, ಪ್ರಾಣಾಯಾಮ, ಬೆನ್ನುಹುರಿ ಅಪಘಾತ ನಿರ್ವಹಣೆ– ದ್ವಿತೀಯಾಂತರ ಸಮಸ್ಯೆಗಳ ಬಗ್ಗೆ ಅರಿವು, ಆಹಾರ ಪಥ್ಯ, ಒತ್ತಡಗಾಯ ನಿರ್ವಹಣೆ, ಸರಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಒಟ್ಟು 16 ಮಂದಿ ದಿವ್ಯಾಂಗರು ಭಾಗವಹಿಸಿದ್ದ ಶಿಬಿರದ ಕೊನೆ ದಿನದಲ್ಲಿ ಹಾಸನ ಪೇಟೆಯಲ್ಲಿ ಗಾಲಿಕುರ್ಚಿ ಜಾಥಾವನ್ನು ಹಮ್ಮಿಕೊಳ್ಳಲಾಯಿತು.

ತುಂಬಾ ಸಮಯದ ತರುವಾಯ ಈ ತಿಂಗಳ ಸೇವಾಸಂಗಮ ಆನ್‌ಲೈನ್ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಕರ್ನಾಟಕ ಅಂಗವಿಕಲರ ಹಕ್ಕು ಅಧಿನಿಯಮದ ಆಯುಕ್ತರಾದ ಶ್ರೀ ದಾಸ್ ಸೂರ್ಯವಂಶಿ ಭಾಗವಹಿಸಿದ್ದು ಪ್ರಸ್ತುತ ದಿನಗಳಲ್ಲಿ ಅವಶ್ಯಕವಾಗಿತ್ತು. ಸುಮಾರು ಒಂದೂವರೆ ಗಂಟೆ ನಡೆದ ಕಾರ್ಯಾಗಾರದಲ್ಲಿ ದಿವ್ಯಾಂಗರ ಸಮಸ್ಯೆಗಳ ನಿವಾರಣೆ ಬಗ್ಗೆ, ಸರಕಾರದ ಆದೇಶದ ಸಮರ್ಪಕ ಆಯೋಜನೆ, ಮಾಸಾಶನ, ಆರೈಕೆದಾರರಿಗೆ ಮಾಸಾಶನ ಲಭಿಸುವ ಮಾರ್ಗೋಪಾಯಗಳ ಬಗ್ಗೆ ಮಾಹಿತಿ, ಅರಿವು, ಸೂಚನೆಗಳನ್ನು ದಿವ್ಯಾಂಗರಿಗೆ ನೀಡಲಾಯಿತು.

ಒಟ್ಟಿನಲ್ಲಿ ನಮ್ಮ ಮುಂದೆ ಬೃಹತ್ ಸವಾಲುಗಳೇ ಇವುಗಳು. ಒಂದುಕಡೆ ಸುಸಜ್ಜಿತವಾಗಬೇಕಾಗಿರುವ ಪುನಶ್ಚೇತನ ಕೇಂದ್ರಗಳು ಸರಕಾರಕ್ಕೆ ಸಲ್ಲಿಸಬೇಕಿರುವ ಮನವಿಗಳು. ಇನ್ನೊಂದೆಡೆ ಆದೇಶಗಳ ಅನುಷ್ಠಾನಗಳು. ಪ್ರಯತ್ನ ನಿರಂತರವಿದೆ. ಪ್ರಾಮಾಣಿಕತೆಯೊಂದಿಗೆ ಮುಂದುವರಿಯುವ ಅಭ್ಯಾಸವಿದೆ. ಭಗವಂತನ ಕೃಪೆ ಬೇಕು ಅಷ್ಟೇ.

ಒಟ್ಟಿನಲ್ಲಿ *ಸೇವಾ ಹೀ ಪರಮೋ ಧರ್ಮಃ*

ಇತೀ ತಮ್ಮವ, ಕೆ. ವಿನಾಯಕ ರಾವ್

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಹಾಸನದಲ್ಲಿ 25ನೇ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ
# 14 ಮಂದಿ ಶಿಬಿರಾರ್ಥಿಗಳು ಶಿಬಿರದಲ್ಲಿ ಭಾಗಿ







ಸೇವಾಭಾರತಿ ಸೇವಾಧಾಮ, ಹಾಸನ ಜಿಲ್ಲೆ ಇದರ ಆಶ್ರಯದಲ್ಲಿ ರಾಜೀವ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಹಾಸನ, ಅಸೋಸಿಯೇಷನ್ ಆಫ್ ಪೀಪಲ್ ವಿಥ್ ಡಿಸೆಬಿಲಿಟಿ ಬೆಂಗಳೂರು ಇವುಗಳ ಸಹಯೋಗದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ 25ನೇ ವಸತಿಯುತ ಉಚಿತ ಆರೋಗ್ಯ ತಪಾಸಣೆ, ಜಾಗೃತಿಶಿಬಿರ ಹಾಗೂ ಗಾಲಿಕುರ್ಚಿ ಜಾಥಾ ಶಿಬಿರದ ಉದ್ಘಾಟನಾ ಸಮಾರಂಭವು ಜೂನ್ 20 ರಂದು ರಾಜೀವ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಹಾಸನದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಹಾಸನದ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀಮತಿ ಅನುಪಮಾ ಕೆ.ಆರ್.ರವರು ಉದ್ಘಾಟಿಸಿ, ಸೇವಾಭಾರತಿ ವತಿಯಿಂದ ನೀಡಿದ್ದ ಮನವಿಯನ್ನು ಸ್ವೀಕರಿಸಿ ಬೆನ್ನುಹುರಿ ಅಪಘಾತಕ್ಕೆ ಒಳಗಾದ ದಿವ್ಯಾಂಗರಿಗೆ ಮಾಸಾಸನ ರೂ. 5000 ಹಾಗೂ ಆರೈಕೆದಾರರಿಗೆ ಭತ್ಯೆ ಸಂಬಂಧಿಸಿದಂತೆ ಅತೀ ಶೀಘ್ರವಾಗಿ ಆಯುಕ್ತರ ಗಮನಕ್ಕೆ ತರುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ ಎಂದು ಉದ್ಘಾಟಕರ ನುಡಿಗಳನ್ನಾಡಿದರು.

ಹಾಸನದ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ। ಲೋಕೇಶ್ ಎಚ್.ಸಿ. ಮಾತನಾಡಿ, ಜಿಲ್ಲೆಯ ಯಾವುದೇ ವಿಕಲಚೇನರಾದರು ಇಲಾಖೆಗೆ ಹೋಗಿ ಸುತ್ತಬೇಕಾಗಿಲ್ಲ, ನಿಮಗೆ ತ್ವರಿತವಾಗಿ UDID ಕಾರ್ಡ್ ಮಾಡುವ ಜವಾಬ್ದಾರಿ ನನ್ನದು. ನನ್ನ ಬಳಿ ಬನ್ನಿ ಎಂಬ ಆಶ್ವಾಸನೆ ನೀಡಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯ, ಕಾರ್ಯದರ್ಶಿ ಬಾಲಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಾಸನ ಜಿಲ್ಲೆಯ ರಾಜೀವ್ ಆಯುರ್ವೇದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಸ್.ಎ. ನಿತಿನ್, ಬೆಂಗಳೂರಿನ ಎ.ಪಿ.ಡಿ. ಸಂಸ್ಥೆಯ ಲೀಡ್ ಫಿಸಿಯೋಥೆರಪಿಸ್ಟ್ ಡಾ। ಶಾರೋನ್ ಮ್ಯಾಥಿವ್, ಸೇವಾಭಾರತಿಯ ಸಲಹಾ ಮಂಡಳಿ ಸದಸ್ಯರಾದ ಡಾ। ಎ. ಜಯಕುಮಾರ್ ಶೆಟ್ಟಿ, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ತಿಂಗಳ ಮಾಸಾಶನ ಹೆಚ್ಚಿಸುವ ಬಗ್ಗೆ, ಆರೈಕೆದಾರರಿಗೆ ಭತ್ಯೆ ನೀಡುವ ಬಗ್ಗೆ, ವಿಕಲಚೇತನರಿಗೆ ಚೈತನ್ಯ ಗಾಲಿ ಕುರ್ಚಿ ನೀಡುವಂತೆ ಎಲ್ಲಾ ಫಲಾನುಭವಿಗಳು ಮತ್ತು ಸಂಸ್ಥೆಯ ವತಿಯಿಂದ ಮನವಿ ಸಲ್ಲಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆರೋಗ್ಯ ಕೇಂದ್ರಗಳಿಂದ ವಿಕಲಚೇತನರಿಗೆ ಉಚಿತವಾಗಿ ಮೆಡಿಕಲ್ ಕಿಟ್, ಸೆಲ್ಫ್‌ಕೇರ್ ಕಿಟ್ ನೀಡುವಂತೆ ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ಮನವಿ ಸಲ್ಲಿಸಲಾಯಿತು.

ಶಿಬಿರದಲ್ಲಿ ನ್ಯೂರೋಲಜಿಸ್ಟ್ ಸಮಾಲೋಚನೆ, ಆರ್ಥೋಪೆಡಿಕ್ ವೈದ್ಯರ ಸಮಾಲೋಚನೆ, ಕಣ್ಣಿನ ತಪಾಸಣೆ, ಹಲ್ಲಿನ ತಪಾಸಣೆ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಜನರಲ್ ವೈದ್ಯ (physician) ರಿಂದ ಸಮಾಲೋಚನೆ, ಫಿಸಿಯೋಥೆರಪಿಸ್ಟ್‌ನಿಂದ ಅಸಿಸ್ಟೆಂಟ್ ಮತ್ತು ಫಿಸಿಯೋಥೆರಪಿಗಳ ಬಗ್ಗೆ ತರಬೇತಿ ಮಾಡಲಾಯಿತು.

MRW ಮತ್ತು ಫಲಾನುಭವಿಗಳ ನಡುವೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳ ಬಗ್ಗೆ ಮುಖಾಮುಖಿ ಚರ್ಚೆ ಮಾಡಲಾಯಿತು. VRW ಗಳಿಗೆ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಗುರುತಿಸುವಿಕೆಯ ಕುರಿತು ಅರಿವು ಮೂಡಿಸಲಾಯಿತು. ಗಾಲಿಕುರ್ಚಿ ಕೌಶಲ್ಯ, ಒತ್ತಡಗಾಯ ನಿರ್ವಹಣೆ ವಿವಿಧ ವಿಷಯಗಳ ಬಗ್ಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ ಮತ್ತು ಮಲ್ಟಿಷೈನಿಂದ ವಿಕಲಚೇತನ ಸ್ನೇಹಿ ವಸ್ತುಗಳ ಕುರಿತು ಪ್ರದರ್ಶನ ಮತ್ತು ಮಾಹಿತಿ, ಹಾಗೇ UDID ನೋಂದಾವಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ APD ಬೆಂಗಳೂರು ಇವರು ನೀಡಿದಂತಹ ಗಾಲಿಕುರ್ಚಿಯನ್ನು ದೇವ ಸಿ. ಮುಗೇರ ಸಕಲೇಶಪುರ ಇವರಿಗೆ ಹಾಸನ ಜಿಲ್ಲೆಯ ಶಸ್ತ್ರಚಿಕಿತ್ಸಕರಾದ ಡಾ। ಲೋಕೇಶ್ ಹೆಚ್.ಸಿ. ಹಸ್ತಾಂತರಿಸಿದರು. ಒಟ್ಟು 14 ಮಂದಿ ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಚಿಕ್ಕಮಗಳೂರು – ಹಾಸನ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ನಾಗಾರ್ಜುನ್ ಸ್ವಾಗತಿಸಿ, ಸೇವಾಭಾರತಿ ಕನ್ಯಾಡಿ ಹಿರಿಯ ಪ್ರಬಂಧಕರಾದ ಚರಣ್ ಕಾರ್ಯಕ್ರಮ ನಿರೂಪಿಸಿ, ಉಡುಪಿ – ಉತ್ತರ ಕನ್ನಡ ಕ್ಷೇತ್ರ ಸಂಯೋಜಕರಾದ ಶಶಾಂತ್ ಧನ್ಯವಾದವಿತ್ತರು.

# ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಅರಿವು



ರಾಜೀವ್ ಫಾರ್ಮಸಿ ಕಾಲೇಜು, ಹಾಸನ



ರಾಜೀವ್ ಆಯುರ್ವೇದ ಕಾಲೇಜು, ಹಾಸನ

ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ ಹಾಗೂ ಗಾಲಿಕುರ್ಚಿ ಜಾಥಾದ ಜೊತೆಗೆ 2 ಕಾಲೇಜಿಗೆ ಭೇಟಿನೀಡಿ ಸುಮಾರು 100 ಮಂದಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಮಾಹಿತಿ ನೀಡಲಾಯಿತು.

ಹಾಸನ ಜಿಲ್ಲೆಯ ರಾಜೀವ್ ಕಾಲೇಜ್ ಫಾರ್ಮಸಿಗೆ ಹಿರಿಯ ಪ್ರಬಂಧಕರಾದ ಚರಣ್ ಹಾಗೂ ಉಡುಪಿ – ಉತ್ತರ ಕನ್ನಡ ಕ್ಷೇತ್ರ ಸಂಯೋಜಕರಾದ ಶಶಾಂತ್ ಭೇಟಿ ನೀಡಿ ಬೆನ್ನುಹುರಿ ಅಪಘಾತ ಹಾಗೂ ಅದರ ನಿರ್ವಹಣೆ ಬಗ್ಗೆ 26 ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ರಾಜೀವ್ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ, ಹಾಸನ ಕಾಲೇಜಿಗೆ ಹಿರಿಯ ಪ್ರಬಂಧಕರಾದ ಚರಣ್ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ವಿಶೇಷಚೇತನ ಆ್ಯಂಟೋನಿ ಭೇಟಿ ನೀಡಿ 74 ವಿದ್ಯಾರ್ಥಿಗಳಿಗೆ ಮಾಹಿತಿ ಇತ್ತರು.

## ಹಾಸನ ಜಿಲ್ಲೆಯಲ್ಲಿ ಗಾಲಿಕುರ್ಚಿ ಜಾಥಾ




ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ 25 ನೇ ಉಚಿತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರದಲ್ಲಿ ಗಾಲಿಕುರ್ಚಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಜನಸಾಮಾನ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಹಾಗೇ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಮುಖ್ಯವಾಹಿನಿಗೆ ಕರೆತರುವ ಉದ್ದೇಶದಿಂದ ಜೂನ್ 22 ರಂದು ರಾಜೀವ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಹಾಸನದಲ್ಲಿ ಗಾಲಿಕುರ್ಚಿ ಜಾಥಾವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಮುರಳೀಧರ ಪಿ.ಕೆ. ಪೊಲೀಸ್ ಉಪಾಧೀಕ್ಷಕರು, ಹಾಸನ ಇವರು ಹಸಿರು ನಿಶಾನೆಯನ್ನು ತೋರಿಸಿ ಜಾಥಾಕ್ಕೆ ಚಾಲನೆಯನ್ನು ನೀಡಿದರು. ಮಹಾರಾಜ ಉದ್ಯಾನವನದ ಮುಂಭಾಗದಿಂದ ಪ್ರಾರಂಭಿಸಿ ಆರ್.ಸಿ.ರಸ್ತೆ ಮುಖಾಂತರ ಸಾಗಿ ಎನ್.ಆರ್. ರಸ್ತೆ ತನಕ ಜಾಥಾವನ್ನು ಮಾಡಲಾಯಿತು. ಒಟ್ಟು 13 ಮಂದಿ ಬೆನ್ನುಹುರಿ ಅಪಘಾತ ಕ್ಕೊಳಗಾದ ದಿವ್ಯಾಂಗರೊಂದಿಗೆ, ಸೇವಾಭಾರತಿ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಸೇರಿದಂತೆ 80 ಮಂದಿ ಜಾಥಾದಲ್ಲಿ ಭಾಗವಹಿಸಿದ್ದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು ಹರೀಶ್ ಕುಮಾರ್, ಮೂಲತಃ ಬೆಳ್ತಂಗಡಿ ತಾಲೂಕು ಸವಣೂರು ಗ್ರಾಮದ ದಕ್ಷಿಣಕನ್ನಡ ಜಿಲ್ಲೆಯವನು. ನಾನು ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದು 15–5–2018 ಊರಿಗೆ ಬಂದು ಮರಳಿಹೋಗುವಾಗ ಕುಣಿಗಲ್– ನೆಲಮಂಗಲದ ಹತ್ತಿರ ನಡೆದ ಎರಡು ಬಸ್ಸುಗಳ ಅವಘಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾಗಿರುತ್ತದೆ. ಆಮೇಲೆ ಪ್ರಥಮಚಿಕಿತ್ಸೆ ಮತ್ತು ಸರ್ಜರಿಯನ್ನು ನಾರಾಯಣ ಹೃದಯಾಲಯ, ಬೆಂಗಳೂರು ಇಲ್ಲಿ ಮಾಡಲಾಯಿತು. ಪುನಶ್ಚೇತನವನ್ನು Sukino healthcare HSR layout ಅಲ್ಲಿ ಮೂರು ತಿಂಗಳ ಕಾಲ ಮಾಡಿದ ನಂತರ ಮನೆಯಲ್ಲಿ ಫಿಸಿಯೋಥೆರಪಿ ಮಾಡಿಸಿಕೊಂಡು ಒಂದು ವರ್ಷ ಕಳೆದ ನಂತರ ನನ್ನ ಸಂಬಂಧಿಕರ ಪರಿಚಯದಿಂದ ಶ್ರೀ ವಿನಾಯಕ ಸರ್‌ರವರ ಪರಿಚಯ ಆಗಿ ಡಾ.ಗಣೇಶ್‌ರವರ ಮುಖಾಂತರ ನಾನು 8–4–2024 ರಂದು ಸೇವಾಧಾಮಕ್ಕೆ ಪುನಶ್ಚೇತನಕ್ಕೆ ಬಂದಿರುತ್ತೇನೆ.

ನಾನು ಸೇವಾಧಾಮಕ್ಕೆ ಬರುವಾಗ ನನಗೆ wheelchair shifting, sitting balance ಎಲ್ಲ ಇದ್ದಿರಲಿಲ್ಲ. ಮಾಮೂಲಿ ಆಗಿ ವ್ಯಾಯಾಮ ಮತ್ತು upperlimb strength ಸ್ವಲ್ಪ ಇತ್ತು. ಇಲ್ಲಿ ಬಂದಮೇಲೆ ಯಾವ ತರಹ ವ್ಯಾಯಾಮ ಮಾಡಬೇಕು ಮತ್ತು ಎಷ್ಟು ಬಾರಿ ಹೇಗೆ ವ್ಯಾಯಾಮ ಮಾಡಬೇಕು ಎಂಬುದರ ಅರಿವಾಯಿತು. ಇಲ್ಲಿ ಬಂದ ಮೇಲೆ ಜೀವನದ ಮುಂದಿನ ಗುರಿ ಮತ್ತು ಸಾಧಿಸುವ ಛಲ ಬಂತು ಎಂಬುದು ಖುಷಿಯ ವಿಚಾರವಾಗಿದೆ. ಸೇವಾಧಾಮದಲ್ಲಿ ಮಾಡುವ ಪ್ರತಿಯೊಂದು ಪ್ರಕ್ರಿಯೆ, ಸಮಯ, ಯೋಗ, ಭಗವದ್ಗೀತೆಯಂತಹ ಸೇವೆಗಳು ನಮ್ಮ ಆಲೋಚನೆಯನ್ನು ಬೇರೆಕಡೆಗೆ ಹೋಗದಂತೆ ಮತ್ತು ನಮ್ಮಲ್ಲಿ ಬರುವಂತಹ ಕೆಟ್ಟ ಆಲೋಚನೆಗಳನ್ನು ದೂರ ಮಾಡಿತು. ವಿನಾಯಕ ಸರ್ ಅವಾಗವಾಗ ಸೇವಾಧಾಮಕ್ಕೆ ಭೇಟಿನೀಡಿ ಬದುಕಿಗೆ ಬೇಕಾದ ಅರ್ಥಪೂರ್ಣವಾದ ಮಾತುಗಳು, ಮುಂದಿನ ಗುರಿ ಹಾಗೂ ಅಪಘಾತದ ನಂತರ ಆಗುವ ಸಮಸ್ಯೆಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡುತ್ತಿದ್ದರು. ಬೆನ್ನುಹುರಿ ಅಪಘಾತ ಆದವರು ಬದುಕನ್ನು ಹೇಗೆ ಕಟ್ಟಿಕೊಳ್ಳಬಹುದು ಎಂಬುದು ಪೂರ್ತಿ ಅರಿವಾಗಿದೆ.

ಸಹಕರಿಸಿದ ಎಲ್ಲರಿಗೂ ವಂದನೆಗಳು ಮತ್ತು ಮುಂದಿನ ದಿನಗಳಲ್ಲಿ ಇನ್ನಷ್ಟು ಸಮಾಜಸೇವೆ ಹಾಗೂ ಮತ್ತಷ್ಟು ಫಲಾನುಭವಿಗಳಿಗೆ ದಾರಿದೀಪವಾಗಲಿ ಎಂದು ಆಶಿಸುತ್ತೇನೆ.

Special thank you for Vinayak sir, Dr Ganesh and all team for your valuable support and guidance for my future plan and goals. Thank you for your hospitality and support again

ಇತಿ ತಮ್ಮ ವಿಶ್ವಾಸಿ, **ಹರೀಶ್ ಕುಮಾರ್**

*I dont need easy, I just need possible*

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಗುಡ್ ಬೈಲೆಪ್ರೊಸಿ, ಬೆಂಗಳೂರು
ಆದಿಶಕ್ತ್ಯಾತ್ಮಕ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ರಕ್ಷಣಾ ಪ್ರತಿಷ್ಠಾನ, ಶ್ರೀ ಕ್ಷೇತ್ರ ಹೊರನಾಡು
ಸ್ವರ್ಣ ಸಂಜೀವಿನಿ ಸೇವಾಟ್ರಸ್ಟ್(ರಿ), ಮಡವು

## ಮಹನೀಯ ದಾನಿಗಳು

ಶ್ರೀ ಬಾಲಕೃಷ್ಣ, ಕೊಕ್ಕಡ
ಶ್ರೀಮತಿ ಮಮತಾ ವಿಶ್ವನಾಥ್, USA
ಶ್ರೀ ಗುರುಪ್ರಸಾದ್ ಟಿ., ಬೆಳ್ತಂಗಡಿ
ಶ್ರೀ ಮೋಹನ್ ಎಸ್, ನಿಡ್ಲೆ
ಶ್ರೀ ಬಸವರಾಜು, ಬೆಂಗಳೂರು
ಶ್ರೀ ಎಚ್. ತುಷಾರ್, ಮಂಗಳೂರು
ಶ್ರೀ ವೆಂಕಟೇಶ್ ಎಚ್, ಹಾಸನ
ಶ್ರೀಮತಿ ವಸಂತಿ ಆರ್. ಗುಡಿಗಾರ್, ಕನ್ಯಾಡಿ
ಶ್ರೀ ಚೈತ್ರೇಶ್ ಸಿ.ಎಸ್., ಬೆಳ್ತಂಗಡಿ
ಶ್ರೀ ಅಮರನಾಥ ಡಿ.ಬಿ, ತುಮಕೂರು
ಶ್ರೀ ಕಂಠೀರವ, ನವತೆ
ಶ್ರೀ ಚಂದ್ರಶೇಖರ್ ಗೌಡ, ಬೆಳ್ತಂಗಡಿ
ಶ್ರೀ ಮಂಜುನಾಥ್
ಕು। ಸ್ನೇಹ
ಸೌಮ್ಯ ಸಾಯಿ ಬೇಕರಿ, ಉಜಿರೆ
ಶ್ರೀ ಸಿ. ರಾಜು
ಶ್ರೀ ಅಕಿಲೇಶ್
ಜಸ್ಟ್ ಬೇಕ್, ಉಜಿರೆ

## ಸೇವಾನಿಧಿ ದಾನಿಗಳು

ಶ್ರೀ ವಿನಾಯಕ ರಾವ್, ಕನ್ಯಾಡಿ
ಕು. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ಶ್ರೀ ರಾಜೇಶ್ ಆರ್. ಫಡ್ಕೆ, ಬೆಂಗಳೂರು
ಶ್ರೀ ಮಧ್ವರಾಜ್ ಎಂ.ಜಿ, ಧರ್ಮಸ್ಥಳ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಡಾ. ರಾಮಕೃಷ್ಣ ಭಟ್ ಜೆ.ಎನ್, ಕನ್ಯಾಡಿ
ಶ್ರೀ ಕೆ. ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ
ಶ್ರೀ ಕೆ. ಪುರಂದರ ರಾವ್, ಧರ್ಮಸ್ಥಳ
ಶ್ರೀಮತಿ ಜಯಂತಿ ಪುರಂದರ, ಧರ್ಮಸ್ಥಳ
ಶ್ರೀ ಬಾಲಕೃಷ್ಣ ರಾವ್ ಕೆ., ಕನ್ಯಾಡಿ
ಶ್ರೀಮತಿ ಸವಿತಾ ಎಂ. ರಾವ್, ಕನ್ಯಾಡಿ
ಶ್ರೀ ಕೆ. ಸೂರ್ಯನಾರಾಯಣ ರಾವ್, ಧರ್ಮಸ್ಥಳ
ಶ್ರೀ ಮಧ್ವರಾಜ್ ಮೂರ್ತಿ ಪಿ. ಉಡುಪಿ
ಶ್ರೀ ಅವಿನಾಶ್ ಶೆಟ್ಟಿ, ಧರ್ಮಸ್ಥಳ
ಶ್ರೀ ಬಿ. ರಾಮ್‌ದಾಸ್ ಭಂಡಾರ್‌ಕರ್
ಶ್ರೀಮತಿ ಸವಿತಾ ಎಂ. ರಾವ್, ಕನ್ಯಾಡಿ
ಶ್ರೀ ರಜತ್ ಕುಮಾರ್ ಜೆ.ಡಿ.
ಶ್ರೀ ಶ್ರೀಧರ ಕೆ.ವಿ, ಉಜಿರೆ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಶಿವಕುಮಾರ, ಉಜಿರೆ
ಶ್ರೀ ಸಂತೋಷ್ ಕೆ., ಕೊಕ್ಕಡ
ಶ್ರೀ ಬಿ. ಪುರಂದರ್, ಧರ್ಮಸ್ಥಳ
ಶ್ರೀ ಮಧುಸೂದನ, ಉಜಿರೆ
ಶ್ರೀ ಕಾರ್ತಿಕ್ ಕೆ., ಕನ್ಯಾಡಿ
ಶ್ರೀ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ನಿತಿನ್, ಉಜಿರೆ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಉಜಿರೆ ಹವ್ಯಕ ವಲಯ, ಉಜಿರೆ

## ನಾರ್ಯದಲ್ಲಿ ಉಚಿತ ಟೈಲರಿಂಗ್ ತರಬೇತಿ ಶಿಬಿರ







ಸೇವಾಭಾರತಿ (ರಿ.), ಕನ್ಯಾಡಿ ಆಶ್ರಯದಲ್ಲಿ ಶ್ರೀ ದುರ್ಗಾಮಾತೃ ಮಂಡಳಿ ಕನ್ಯಾಡಿ ಮತ್ತು ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರ ಸಂಘ (ನಿ), ಉಜಿರೆ ಇವುಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ 27ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಜೂನ್ 20 ರಂದು ನಾರ್ಯ ಅಂಗನವಾಡಿ ಕೇಂದ್ರದಲ್ಲಿ ನಡೆಯಿತು.

ಬೆಳ್ತಂಗಡಿ ತಾಲೂಕಿನ ಸ್ಥಾನಿಕ ಸಂಘದ ಭಜನಾ ತಂಡ ಅಧ್ಯಕ್ಷೆ ರಮ್ಯಾ.ಎಸ್ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಹಿಳೆಯರಿಗೆ ಶಿಕ್ಷಣ ಅತ್ಯಗತ್ಯ ಅದರ ಜೊತೆಗೆ ಮಹಿಳೆಯರು ಸ್ವ–ಉದ್ಯೋಗ ತರಬೇತಿ ಪಡೆದು, ಸ್ವಾವಲಂಬಿಯಾಗಿ ಜೀವನ ನಡೆಸಿದಾಗ, ಮಹಿಳಾ ಸಬಲೀಕರಣಕ್ಕೆ ನಿಜವಾದ ಅರ್ಥ ನೀಡಿದಂತಾಗುತ್ತದೆ ಎಂದು ಉದ್ಘಾಟಕರ ನುಡಿಗಳನ್ನಾಡಿದರು.

ಸೇವಾಭಾರತಿಯ ಮಹಿಳಾ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಸಮಿತಿ ಅಧ್ಯಕ್ಷೆ ಕೆ. ವಸಂತಿ ಗೌಡ ಮಾತನಾಡಿ, ಒಂದು ತಿಂಗಳ ಅವಧಿಯಲ್ಲಿ ಕನಿಷ್ಠ ರವಿಕೆ ಮತ್ತು ಚೂಡಿದಾರ ಹೊಲಿಯಲು ಶಿಬಿರದಲ್ಲಿ ತರಬೇತಿ ನೀಡಲಾಗುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರು ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ದುರ್ಗಾಮಾತೃ ಮಂಡಳಿಯ ಅಧ್ಯಕ್ಷರಾದ ಶಾಂತಾ ಪಿ. ಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ದುರ್ಗಾಮಾತೃ ಮಂಡಳಿ ಕನ್ಯಾಡಿಯ ಖಜಾಂಚಿ ಬಬಿತಾ, ಸದಸ್ಯೆ ಸುಮತಿ, ಟೈಲರಿಂಗ್ ತರಬೇತುದಾರರಾದ ರಶ್ಮಿ, ನಾರ್ಯ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಜಾನಕಿ, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷೆ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ ಇದರ ಸಿಇಒ ಸ್ವರ್ಣಗೌರಿ ಪ್ರಾಸ್ತಾವಿಕ ನುಡಿಗಳನ್ನಾಡಿ, ಸೇವಾಭಾರತಿ ಕನ್ಯಾಡಿಯ ಅಕೌಂಟೆಂಟ್ ಅಕ್ಷತಾ ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂಟಿಂಗ್ ಸಂಯೋಜಕರು ಸುಮನ ಕಾರ್ಯಕ್ರಮ ನಿರೂಪಿಸಿ, ಧನ್ಯವಾದವಿತ್ತರು.

ಒಟ್ಟು 23 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ವಿಶ್ವ ರಕ್ತದಾನಿಗಳ ದಿನಾಚರಣೆ ಪ್ರಯುಕ್ತ ಧರ್ಮಸ್ಥಳದಲ್ಲಿ 96ನೇ ಬೃಹತ್ ರಕ್ತದಾನ ಶಿಬಿರ





ರೋಟರಿ ಕ್ಲಬ್ ಬೆಳ್ತಂಗಡಿ ನೇತೃತ್ವದಲ್ಲಿ ವೀರಕೇಸರಿ ಬೆಳ್ತಂಗಡಿ, ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ಧರ್ಮಸ್ಥಳ, ಎ.ಜೆ. ಬ್ಲಡ್‌ಸೆಂಟರ್ ಮತ್ತು ಎ.ಜೆ. ಹಾಸ್ಪಿಟಲ್ ಹಾಗೂ ರೀಸರ್ಚ್ ಸೆಂಟರ್, ಮಂಗಳೂರು ಇವುಗಳ ಸಹಭಾಗಿತ್ವದಲ್ಲಿ ಮತ್ತು ಸೇವಾಭಾರತಿ (ರಿ.), ಕನ್ಯಾಡಿ ಇದರ ಸಂಯೋಜನೆಯಲ್ಲಿ 96ನೇ ಬೃಹತ್ ರಕ್ತದಾನ ಶಿಬಿರವು ಜೂನ್ 14 ರಂದು ಧರ್ಮಸ್ಥಳದ ಅಟಲ್ ಜೀ ಸಭಾಭವನದಲ್ಲಿ ಜರುಗಿತು.

ರೋಟರಿ ಕ್ಲಬ್ ಬೆಳ್ತಂಗಡಿಯ ನಿಯೋಜಿತ ಅಧ್ಯಕ್ಷರಾದ ರೊ। ಪೂರನ್ ವರ್ಮ ಉದ್ಘಾಟಿಸಿ, ರಕ್ತದ ತುರ್ತು ಅವಶ್ಯಕತೆಗೆ ಹೆಚ್ಚು ಸ್ಪಂದಿಸಲು ರಕ್ತದಾನ ಶಿಬಿರಗಳ ಆಯೋಜನೆ ಮಹತ್ತರವಾದುದು. ನಾವುಗಳು ರಕ್ತದಾನ ಮಾಡುವುದನ್ನು ಮುಂದೂಡಬಹುದು ಆದರೆ ತುರ್ತು ರಕ್ತ ಅವಶ್ಯಕತೆ ಇರುವ ರೋಗಿಗಳ ಚಿಕಿತ್ಸೆಗೆ ರಕ್ತಪೂರೈಕೆ ಮಾಡುವುದನ್ನು ಮುಂದೂಡಲು ಸಾಧ್ಯವಿಲ್ಲವೆಂದರು. ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ನಾಲ್ಕು ಜನರ ಬದುಕಿಗೆ ಬೆಳಕು ಚೆಲ್ಲಿದಂತಾಗುತ್ತದೆ ಎಂದು ತಿಳಿಸಿ, ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ಧರ್ಮಸ್ಥಳದ ಅಧ್ಯಕ್ಷರಾದ ಪ್ರೀತಮ್ ಡಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಸೇವಾಭಾರತಿ (ರಿ.), ಕನ್ಯಾಡಿ ಸಂಸ್ಥೆ, ವೀರಕೇಸರಿ ಬೆಳ್ತಂಗಡಿ ಆಯೋಜಿಸುತ್ತಿರುವ ಉತ್ತಮ ಸಮಾಜಮುಖಿ ಚಟುವಟಿಕೆಗಳಿಗೆ ಪ್ರಶಂಸೆ ವ್ಯಕ್ತಪಡಿಸಿದರು. ಇನ್ನೂ ಮುಂದೆಯೂ ರಕ್ತದಾನ ಶಿಬಿರಗಳಂತಹ ಕಾರ್ಯಕ್ರಮಗಳಿಗೆ ಸಂಘದ ಸಹಕಾರ ನಿರಂತರವಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಅನ್ನಪೂರ್ಣ ಛತ್ರದ ಮ್ಯಾನೇಜರ್ ಸುಬ್ರಮಣ್ಯ ಪ್ರಸಾದ್ ಮಾತನಾಡಿ ಧರ್ಮಸ್ಥಳದ ಪೂಜ್ಯ ಖಾವಂದರಾದ ಡಾ। ಡಿ. ವೀರೇಂದ್ರ ಹೆಗಡೆಯವರು ಹಾಗೂ ಶ್ರೀಮತಿ ಹೇಮಾವತಿ ವಿ. ಹೆಗಡೆಯವರ ನಿರ್ದೇಶನದಂತೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸಮಾಜ ಮುಖಿ ಸೇವಾ ಚಟುವಟಿಕೆಗಳು ನಿರಂತರತೆಯನ್ನು ಪಡೆದಿದೆ ಎಂದು ತಿಳಿಸಿದರು.

ಮಂಗಳೂರಿನ ಎ.ಜೆ. ಬ್ಲಡ್‌ಸೆಂಟರ್‌ನ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ರಕ್ತನಿಧಿ ವಿಭಾಗದ ಮುಖ್ಯಸ್ಥರಾದ ಡಾ. ಅರವಿಂದ ಪಿ. ಮಾತನಾಡಿ, ಉಳಿದ ಜಿಲ್ಲೆಯವರಿಗೆ ಹೋಲಿಸಿದರೆ, ದಕ್ಷಿಣಕನ್ನಡ ಜಿಲ್ಲೆಯವರಿಗೆ ರಕ್ತದಾನದ ಬಗ್ಗೆ ಜಾಗೃತಿ ಇದೆ ಮತ್ತು ಇಲ್ಲಿನ ರಕ್ತದಾನ ಶಿಬಿರಗಳಲ್ಲಿ ಹೆಚ್ಚು ರಕ್ತದಾನಿಗಳು ಭಾಗವಹಿಸುತ್ತಿರುವುದು ಸಂತಸದ ವಿಷಯವಾಗಿದೆ. ವಿಶ್ವ ರಕ್ತದಾನಿಗಳ ದಿನಾಚರಣೆ ಹಾಗೂ ರಕ್ತದಾನದ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ವಿಶ್ವ ರಕ್ತದಾನಿಗಳ ದಿನಾಚರಣೆ ಪ್ರಯುಕ್ತ ಈವರೆಗೆ 51 ಬಾರಿ ರಕ್ತದಾನ ಮಾಡಿದ ಉಜಿರೆಯ ಪ್ರಗತಿಪರ ಕೃಷಿಕ ಈಶ್ವರ ಭಟ್ ಅತ್ತಾಜೆ ಹಾಗೂ 52 ಬಾರಿ ರಕ್ತದಾನ ಮಾಡಿದ ಪುರುಷೋತ್ತಮ ಗೌಡ ಕೊಕ್ಕಡ, ಬೆಳ್ತಂಗಡಿ ತಾಲೂಕಿನಾದ್ಯಂತ 75ಕ್ಕೂ ಹೆಚ್ಚು ರಕ್ತದಾನ ಶಿಬಿರಕ್ಕೆ ಸಂಘ–ಸಂಸ್ಥೆಗಳನ್ನು ಸಂಘಟಿಸಿ, ಶಿಬಿರಗಳನ್ನು ಆಯೋಜಿಸಿದ ಹಾಗೂ ತುರ್ತು ರಕ್ತದ ವ್ಯವಸ್ಥೆಯನ್ನು ಮಾಡುತ್ತಿರುವ ಶ್ರೀಧರ್ ಕೆ. ವಿ. ಉಜಿರೆ, ತಾಲೂಕಿನಲ್ಲಿ ಅತಿಹೆಚ್ಚು ರಕ್ತದಾನ ಶಿಬಿರಗಳನ್ನು ಆಯೋಜಿಸಿರುವ ವೀರಕೇಸರಿ ಬೆಳ್ತಂಗಡಿ ಹಾಗೂ ಶಿವಾಜಿ ಬಾಯ್ಸ್ ಆಫ್ ಗ್ರೂಪ್, ಕೊಕ್ಕಡ ಇವರುಗಳನ್ನು ಗೌರವಿಸಿ, ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ, ಸೇವಾಭಾರತಿಯ ಆರೋಗ್ಯಮ್ ಪ್ರಮುಖರಾದ ಶ್ರೀಧರ್ ಕೆ.ವಿ. ಉಜಿರೆ, ವೀರಕೇಸರಿ ಬೆಳ್ತಂಗಡಿಯ ಸದಸ್ಯರಾದ ಸುಧಾಕರ್ ಧರ್ಮಸ್ಥಳ, ಸೇವಾಭಾರತಿಯ ಸಲಹಾಮಂಡಳಿ ಸದಸ್ಯರಾದ ರಜತ್ ರಾವ್ ಇವರುಗಳು ವೇದಿಕೆಯಲ್ಲಿ ಉಪಸಿತರಿದ್ದರು.

ಸೇವಾಭಾರತಿಯ ನಿಯೋಜಿತ ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂಟಿಂಗ್ ಕೋ–ಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಆರೋಗ್ಯ ಪ್ರಮುಖರಾದ ಶ್ರೀಧರ್ ಕೆ.ವಿ. ಉಜಿರೆ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿ, ಸಲಹಾ ಮಂಡಳಿಯ ಸದಸ್ಯರಾದ ರಜತ್ ರಾವ್ ಧನ್ಯವಾದವಿತ್ತರು. ಈ ಶಿಬಿರದಲ್ಲಿ ಒಟ್ಟು 177 ಯುನಿಟ್ ರಕ್ತವನ್ನು ಸಂಗ್ರಹಿಸಲಾಯಿತು.

## ಜೂನ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 3 |
| 2. | ಮಂಚ ಮತ್ತು ಹಾಸಿಗೆ | – 1 |
| 3. | ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ | – 24 |
| 4. | ಬಿಪಿ ಮತ್ತು ಡಯಾಬಿಟಿಸ್ ಕಿಟ್ | – 2 |

*I dont need easy, I just need possible*

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...


ಶ್ರೀ ಬಾಲಕೃಷ್ಣ, ನೈಮಿಷ


ಶ್ರೀಮತಿ ಚಂದನ್ ಚವನ್, ಮುಂಬೈ


ಶ್ರೀ ಗಣೇಶ್ ಕಲ್ಯೆ, ಕೊಕ್ಕಡ


ಶ್ರೀ ಕೆ.ಎಸ್ ಮಂಜುನಾಥ್, ರಾಮನಗರ


ಶ್ರೀ ಪುರುಷೋತ್ತಮ ಡಿ.ಎ ಧರ್ಮಸ್ಥಳ


ಮಾಸ್ಟರ್ ಸೋಹಂ ಉಡುಪ ಬೆಂಗಳೂರು


ಶ್ರೀಮತಿ ವಸಂತಿ ಗೌಡ ದೊಂಡೋಲೆ


ಶ್ರೀಮತಿ ವಸಂತಿ ಆರ್. ಗುಡಿಗಾರ್, ಕನ್ಯಾಡಿ




ಶ್ರೀ ಪವನ್ ರಾಜ್ ಶೆಟ್ಟಿ ಮತ್ತು ಶ್ರೀಮತಿ ಭವ್ಯ ಶೆಟ್ಟಿ, ಮಂಗಳೂರು


ಶ್ರೀ ರೋಶನ್ ಬೆಳ್ಮಣ್



# ಉಡುಪಿ 'ಜನಸ್ಪಂದನ ಕಾರ್ಯಕ್ರಮ'ದಲ್ಲಿ ಡಿ.ಸಿ, ಡಿಎಚ್‌ಒಗೆ ಮನವಿ



ಉಡುಪಿ ಜಿಲ್ಲೆಯಲ್ಲಿ ನಡೆದ 'ಜನಸ್ಪಂದನ ಕಾರ್ಯಕ್ರಮ'ದಲ್ಲಿ ಹಿಂದುಳಿದ ವರ್ಗದ ಮೋರ್ಚಾ ಉಡುಪಿ ಜಿಲ್ಲಾ ಅಧ್ಯಕ್ಷ, ಕೊಡವೂರು ವಾರ್ಡಿನ ನಗರಸಭಾ ಸದಸ್ಯ ಹಾಗೂ ಸೇವಾಭಾರತಿ ಕನ್ಯಾಡಿಯ ಸಲಹಾ ಸಮಿತಿ ಸದಸ್ಯರಾದ ಕೆ. ವಿಜಯ ಕೊಡವೂರು ಸಭೆಯಲ್ಲಿ ಚರ್ಚಿಸಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಬೆಂಗಳೂರು ಇದರ ಆದೇಶ 2011ರ ಅನ್ವಯ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆರೋಗ್ಯ ಕೇಂದ್ರ ಮತ್ತು ಸರಕಾರಿ ಆಸ್ಪತ್ರೆಗಳ ಮೂಲಕ ಸಿಗಬೇಕಾದ ಸೆಲ್ಫ್‌ಕೇರ್ ಕಿಟ್, ಮೆಡಿಕಲ್ ಕಿಟ್ ಹಾಗೂ ಇತರೆ ಅಗತ್ಯ ಸಾಧನ ಸಲಕರಣೆಗಳು ಪೂರ್ಣ ರೀತಿಯಲ್ಲಿ ಸಿಗದಿರುವ ಹಿನ್ನಲೆಯಲ್ಲಿ ಉಡುಪಿ ಜಿಲ್ಲೆಯ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆದೇಶದ ಸಮರ್ಪಕ ಕಾರ್ಯಾನುಷ್ಠಾನವಾಗುವಂತೆ ಉಡುಪಿ ಜಿಲ್ಲಾಧಿಕಾರಿ ಡಾ. ಕೆ. ವಿದ್ಯಾಕುಮಾರಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಈಶ್ವರ್ ಗಡಾದ್‌ರವರುಗಳ ಗಮನಕ್ಕೆ ತಂದು, ಆದೇಶದ ಪ್ರತಿ ಸಲ್ಲಿಸಲಾಯಿತು.

*Life would be tragic if it weren't funny*

## ಸೇವಾಧಾಮದಲ್ಲಿ ಯೋಗ ಮತ್ತು ಜಾಗೃತಿ ಕಾರ್ಯಗಾರ



10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಸೇವಾಧಾಮ, ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರ ಸೌತಡ್ಕದಲ್ಲಿ ಯೋಗತರಬೇತುದಾರರಾದ ಕು. ಭಾಷಿಣಿ, ಧರ್ಮಸ್ಥಳ ಶಿಬಿರವನ್ನು ಉದ್ಘಾಟಿಸಿ, ಕೇಂದ್ರದ ಸನಿವಾಸಿಗಳಿಗೆ ಹಾಗೂ ಆರೈಕೆದಾರರಿಗೆ, ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳುವಲ್ಲಿ ಯೋಗದ ಮಹತ್ವವನ್ನು ತಿಳಿಸಿ, ವಿವಿಧ ಆಸನಗಳ ಯೋಗಾಭ್ಯಾಸವನ್ನು ನಡೆಸಿಕೊಟ್ಟರು. ಸಂಸ್ಥೆಯ ಪರವಾಗಿ ಅವರನ್ನು ಗೌರವಿಸಿ, ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸೇವಾಭಾರತಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಮೋಹನ್ ಎಸ್. ಹಾಗೂ ಪುನಶ್ಚೇತನ ಕೇಂದ್ರದ ಫಿಸಿಯೋಥೆರಪಿಸ್ಟ್ ಸುರಕ್ಷಾ ಡಿ.ಪಿ. ಉಪಸ್ಥಿತರಿದ್ದರು.

## ಜೂನ್ ತಿಂಗಳಲ್ಲಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀ ದಿನೇಶ್ ರೈ, ಪುತ್ತೂರು




ಶ್ರೀ ಶ್ರೀನಿವಾಸ್, ಪೆರುವಾಜೆ



ಶ್ರೀ ವಿನಯ ಶಿರಸಿ

## ಸೇವಾ ಸಂಗಮ ಆನ್‌ಲೈನ್ ಕಾರ್ಯಗಾರ




ಜೂನ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ ಆಯುಕ್ತರು– ಕರ್ನಾಟಕ, ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯಿದೆ ಶ್ರೀದಾಸ್ ಸೂರ್ಯವಂಶಿಯವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಸಮಸ್ಯೆ ಮತ್ತು ಸೌಲಭ್ಯದ ಬಗ್ಗೆ ಮಾಹಿತಿ ಇತ್ತರು. ಕಾರ್ಯಗಾರದಲ್ಲಿ ಒಟ್ಟು 102 ಮಂದಿ ಭಾಗವಹಿಸಿದ್ದರು.

## ನಿಮಗಿದು ತಿಳಿದಿರಲಿ

### ಅಪಘಾತವಾದಾಗ ತಕ್ಷಣದ ಸರಿ ವಿಧಾನ

ಆಕಸ್ಮಿಕವಾಗಿ ಬೆನ್ನುಹುರಿ ಅಪಘಾತವಾದಲ್ಲಿ ಅಪಘಾತಕ್ಕೆ ಒಳಗಾದ ವ್ಯಕ್ತಿಯನ್ನು ನಿಲ್ಲಿಸುವುದಾಗಲಿ, ಕೂರಿಸುವುದಾಗಲಿ ಮಾಡಬಾರದು, ಭಾರವಾದ ವಸ್ತುಗಳ ಅಡಿಯಲ್ಲಿ ಸಿಲುಕಿದವರನ್ನು ಮೇಲೆ ಎಳೆಯುವುದರಿಂದ ಮತ್ತು ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ಅನುಸರಿಸುವ ತಪ್ಪು ವಿಧಾನಗಳಿಂದ ಅಪಘಾತದಲ್ಲಿ ಆದ ತೊಂದರೆಗಿಂತ ಹೆಚ್ಚು ತೊಂದರೆಯನ್ನು ಉಂಟುಮಾಡುತ್ತಿದ್ದಾರೆ.

ಅದರಿಂದ ಅಪಘಾತಕ್ಕೆ ಒಳಗಾದ ವ್ಯಕ್ತಿಯನ್ನು ಅಪಘಾತದ ಸ್ಥಳದಿಂದ ಸಮನಾಂತರವಾಗಿ ಮಲಗಿಸಿ ನಂತರ ಮರದಹಲಗೆಯ ಮೇಲೆ ಸಾಗಿಸುವುದರ ಮೂಲಕ ತಕ್ಷಣ ಆಸ್ಪತ್ರೆಯ ವೈದ್ಯರಲ್ಲಿ ಚಿಕಿತ್ಸೆ ಪಡೆಯುವುದರಿಂದ ಹೆಚ್ಚು ಸಮಸ್ಯೆಗಳಾಗದಂತೆ ತಡೆಯಬಹುದು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು**: ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟುಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*

# ಬೆನ್ನುಹುರಿ ಅಪಘಾತಗೊಂಡರು ಧೃತಿಗೆಡದೆ ಅಡಿಕೆ ಸುಲಿಯುತ್ತಿರುವ ಪರಮೇಶ್ವರ ವಿಟ್ಲರ ಯಶೋಗಾಥೆ



**ಕೆಲವು ಅಡೆತಡೆಗಳ ನಡುವೆಯೂ ನಂಬಲಾಗದ ಸಾಧನೆಗಳ ಬಗ್ಗೆ ಕೇಳುವುದು, ಯಾವುದೇ ಸಂದರ್ಭದಲ್ಲೂ ಸ್ಫೂರ್ತಿದಾಯಕವಾದ ಮಾತುಗಳೇನಿಸುತ್ತದೆ. ಹೌದು ಕೆಲವು ಸಮಸ್ಯೆಗಳು ಎದುರಾಗಿ ಜಯಿಸಲು ಕಷ್ಟವಾಗಿದ್ದರೂ ತಮ್ಮ ಛಲವನ್ನು ಬಿಡದೆ ಅದೆಷ್ಟೋ ಜೀವನದ ಬಾಗಿಲನ್ನು ತೆರೆದ ಸ್ಫೂರ್ತಿದಾಯಕ ವ್ಯಕ್ತಿಗಳ ಕಥೆಗಳಿವೆ.**

ಅಂತವರಲ್ಲಿ ಬೆನ್ನುಹುರಿ ಅಪಘಾತಗೊಂಡು ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಪಣತೊಟ್ಟು ಮನೆಮನೆಗೆ ಹೋಗಿ ಅಡಿಕೆ ಸುಲಿಯುತ್ತ ತಮ್ಮ ಯಶಸ್ಸಿನ ಜೀವನವನ್ನು ಸಾಗಿಸುತ್ತಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ಪರಮೇಶ್ವರ ವಿಟ್ಲ ಇವರ ಯಶೋಗಾಥೆ ನಿಮ್ಮ ಮುಂದಿದೆ.

ಇವರು ಮೂಲತಃ ವಿಟ್ಲದ ನಿವಾಸಿಯಾಗಿದ್ದು ಜೂನ್ 9 – 1984ರಲ್ಲಿ ಜನಿಸಿದರು. ತಂದೆ ಕಾಂತು ತಾಯಿ ಸರೋಜಾ ಇವರಿಗೆ ಒಬ್ಬನೇ ಪುತ್ರ ಪರಮೇಶ್ವರ ವಿಟ್ಲ ಇವರ ಧರ್ಮಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಚಿಕ್ಕ ಕುಟುಂಬದಲ್ಲಿ ಸುಂದರವಾದ ಜೀವನವನ್ನು ಸಾಗಿಸುತ್ತಿದ್ದರು. ತನ್ನ ಪ್ರಾಥಮಿಕ ಶಿಕ್ಷಣವನ್ನು ವಿಟ್ಲದ ಒಕೆತ್ತೂರಿನಲ್ಲಿ ಮುಗಿಸಿ ನಂತರ ಪದವಿ ಪೂರ್ವ ವಿಟ್ಲದಲ್ಲಿ ತನ್ನ ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರು. ಅನೇಕ ಸಮಸ್ಯೆಗಳ ನಡುವೆಯೂ ತನ್ನ ವಿದ್ಯಾಭ್ಯಾಸವನ್ನು 10ನೇ ತರಗತಿಯ ತನಕ ಮಾಡಿ ಕೆಲವು ಅಡೆತಡೆಗಳಿಂದ ತನ್ನ ವಿದ್ಯಾಭ್ಯಾಸವನ್ನು ಹತ್ತನೇ ತರಗತಿಗೆ ಮುಗಿಸಿಬಿಟ್ಟರು. ಜೀವನದ ಬಂಡಿ ಸಾಗಿಸಬೇಕೆಂಬ ನಿಟ್ಟಿನಲ್ಲಿ ಕೂಲಿ ಕೆಲಸವನ್ನು ಮಾಡುತ್ತ ತನ್ನ ಜೀವನವನ್ನು ಸಾಗಿಸುತ್ತಿದ್ದರು. ಸರಿಸುಮಾರು 25 ವರ್ಷಗಳ ತನಕ ಈ ಕೆಲಸದಲ್ಲಿ ತನ್ನನ್ನೇ ತಾನು ತೊಡಗಿಸಿಕೊಳ್ಳುತ್ತಿದ್ದರು. ಜೀವನದಲ್ಲಿ ಕಷ್ಟ ಎನ್ನುವುದು ಮನುಷ್ಯನ ಜೀವನವನ್ನೇ ಬದಲಾಯಿಸಿಬಿಡುತ್ತದೆ ಎಂದು ಹೇಳಿದರು ತಪ್ಪಾಗಲಾರದು.

ಸಮಸ್ಯೆ ಇದ್ದವರಿಗೆ ಯಾವತ್ತೂ ಸಮಸ್ಯೆನೇ ಎಂಬ ಮಾತು ಇದೆ. ತನ್ನ ಚಿಕ್ಕ ಕುಟುಂಬದಲ್ಲಿ ಸುಂದರ ಜೀವನವನ್ನು ಸಾಗಿಸುತ್ತಿದ್ದ ಪರಮೇಶ್ವರ ವಿಟ್ಲ ಎಪ್ರಿಲ್ 24 – 2019 ರಂದು ಇಳಿಜಾರು ಜಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಆಯತಪ್ಪಿ ಜಾರಿ ಬಿದ್ದಾಗ ತಕ್ಷಣ ಇವರನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದರು. ಬೆನ್ನುಮೂಳೆಗೆ ಕಲ್ಲು ತಾಕಿದ ಪರಿಣಾಮದಿಂದ ವೆನ್ಲಾಕ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಯಿತು. ತದನಂತರ ವೈದ್ಯರು, ನಿಧಾನವಾಗಿ ನೀವು ಗುಣಮುಖರಾಗುತ್ತೀರ ಎಂಬ ಭರವಸೆಯನ್ನು ನೀಡಿದರು.

ತನ್ನ ಜೀವನದಲ್ಲಿ ಭರವಸೆ ಕಳೆದುಕೊಂಡು ಜೀವನ ಕಳೆಯುತ್ತಿದ್ದಾಗ ಬೆನ್ನೆಲುಬಾಗಿ ನಿಂತು ಬೆಂಬಲ ಮತ್ತು ಸಹಾಯ ನೀಡಿದವರು ಕುಟುಂಬ ವರ್ಗದವರು ಹಾಗೂ ಊರಿನವರು ಇಂತಹ ಸಂದರ್ಭದಲ್ಲಿ ಯಾವುದೇ ಧೈರ್ಯಗೆಡದೆ ಜೀವನದ ಬಗ್ಗೆ ಭರವಸೆ ಕಳೆದುಕೊಳ್ಳದಂತೆ ಇರಲು ನನ್ನ ತಂದೆ, ತಾಯಿ ಹಾಗೂ ಧರ್ಮಪತ್ನಿ ನನ್ನ ಬೆನ್ನೆಲುಬಾಗಿ ನಿಂತರು. ಹೀಗೆ 2019 ರಲ್ಲಿ ಏನು ಮಾಡುವುದು ಎಂದು ತೋಚದೆ, ದಾರಿಕಾಣದಾದಗ ತನಗೆ ಶಸ್ತ್ರಚಿಕಿತ್ಸೆ ಮಾಡಿದ ಈಶ್ವರ್. ಜಿ ಇವರು ಸೇವಾಧಾಮಕ್ಕೆ ಭೇಟಿನೀಡಲು ಹೇಳಿದರು. ಇವರ ಮುಖಾಂತರ ಸೇವಾಧಾಮದ ಸಂಸ್ಥಾಪಕರಾದ ಶ್ರೀ. ಕೆ. ವಿನಾಯಕ ರಾವ್‌ರವರನ್ನು ಭೇಟಿ ನೀಡಿ ಸೇವಾಧಾಮಕ್ಕೆ ಪುನಶ್ಚೇತನ ಪಡೆಯಲು ಮುಂದಾದರು. ಈ ಮೊದಲು ಹಾಸಿಗೆಯಲ್ಲೇ ಮಲಗಿ ತನ್ನ ದಿನನಿತ್ಯದ ಕಾಲ ಕಳೆಯುತ್ತಿದ್ದ ವ್ಯಕ್ತಿ ಪುನಶ್ಚೇತನ ಪಡೆದ ನಂತರ ಗಾಲಿಕುರ್ಚಿಯಲ್ಲಿ ತುಂಬಾ ಸಮಯದವರೆಗೆ ಕುಳಿತುಕೊಳ್ಳಲು ಪ್ರಾರಂಭಿಸಿದರು. ನಾನು ಕೂರಬಲ್ಲೆ ನಮ್ಮಂತವರು ಹೀಗೂ ಓಡಾಡಬಹುದು ಎಂದು ತಿಳಿದಿದ್ದೆ ಸೇವಾಧಾಮಕ್ಕೆ ಭೇಟಿ ನೀಡಿದ ನಂತರ 'ನನ್ನ ಜೀವನ ರೂಪಿಸಿಕೊಳ್ಳಲು ಬಹಳ ಸಹಾಯಕವಾಗಿದೆ ಎನ್ನುತ್ತಾರೆ ಪರಮೇಶ್ವರ ವಿಟ್ಲ.

ಪುನಶ್ಚೇತನದ ನಂತರ ತನ್ನ ಜೀವನದಲ್ಲಿ ನಾನು ಏನಾದರೂ ಸಾಧಿಸಬೇಕು ಯಾವುದು ನನ್ನಿಂದ ಅಸಾಧ್ಯವೆಂದು ಆಗಬಾರದು ಎಂಬ ನಿಟ್ಟಿನಲ್ಲಿ ಮೂರುವರ್ಷಗಳ ಹಿಂದೆ ರೋಟರಿ ಕ್ಲಬ್ ಕಡೆಯಿಂದ ನಿಯೋ ಮೋಶನ್ ಗಾಲಿಕುರ್ಚಿಯನ್ನು ಪಡೆದುಕೊಂಡಿದ್ದರು. ನಂತರ ಬೆಂಗಳೂರಿನಲ್ಲಿ ಕಂಪ್ಯೂಟರ್ ವೈನಿಂಗ್ ಕೆಲಸವನ್ನು ಮಾಡಲು ಮುಂದಾದರು ಅಲ್ಲಿಯೂ ಆರೋಗ್ಯದಲ್ಲಿ ಏರುಪೇರಾದ ಕಾರಣ ಅಲ್ಲಿಂದ ಹಿಂತಿರುಗಿ ಬಂದರು. ತದನಂತರ ಎರಡು ತಿಂಗಳ ಹಿಂದೆ ಸೆಲ್ಕೋ ಫೌಂಡೇಶನ್ ಕಡೆಯಿಂದ ನಿಯೋಬೋಲ್ಟ್ ಗಾಡಿಯನ್ನು ನೀಡಿದ್ದರಿಂದ ಪರಮೇಶ್ವರ ವಿಟ್ಲ ಮನೆಮನೆಗೆ ಹೋಗಿ ಅಡಿಕೆ ಸುಲಿಯುತ್ತಿದ್ದಾರೆ. ನಿಯೋಬೋಲ್ಟ್ ಸಿಕ್ಕಿದ್ದರಿಂದ ನನಗೆ ಎರಡು ಕಾಲು ದೊರಕಿದಂತಾಗುತ್ತದೆ ಎಂದು ತನ್ನ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಯಾರಿಗೂ ನಾನು ಅವಲಂಬಿತವಾಗದೆ ನನ್ನ ಕಾಲಮೇಲೆ ನಾನೇ ನಿಂತುಕೊಳ್ಳಬಲ್ಲೆ ಎಂಬ ಭರವಸೆಯಿಂದ ಜೀವನದ ವಿಜಯಪಥದ ಕಡೆಗೆ ಮುನ್ನಡೆಯುತ್ತಿದ್ದಾರೆ.